**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.104/2025**

| | | |
|---|---|---|
| ಸಾಕ್ಷಿದಾರರ ಹೆಸರು | : | ಕರಿಯಪ್ಪ |
| ತಂದೆಯ ಹೆಸರು | : | ಚೌಡಪ್ಪ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಕೂಲಿ |
| ವಾಸ ಸ್ಥಳ | : | ಹೆಗಡೆಹಾಳ , ಚಿತ್ರದುರ್ಗ ತಾಲ್ಲೂಕು ಮತ್ತು ಜಿಲ್ಲೆ |

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 11

ದಿ: 26-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಸತೀಶ್ )**:

1. ನಮ್ಮ ತಂದೆ ತಾಯಿಗೆ ನಾವು 04 ಜನ ಮಕ್ಕಳು, ಮೂರು ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳು. ಮೃತ ಶಿವಕುಮಾರ 4 ನೇ ಮಗ ಇರುತ್ತಾರೆ. ವಿಸಿಯಲ್ಲಿ ಕಾಣುವ ಆರೋಪಿ ನನಗೆ ಗೊತ್ತಿದೆ. ಚಾಸಾ-1 ನನ್ನ ಅಣ್ಣ. ಚಾಸಾ-7 ರಿಂದ 10 ರವರ ಪರಿಚಯ ನನಗೆ ಇದೆ. ನನ್ನ ತಮ್ಮ ಶಿವುಕುಮಾರವರ ಕೊಲೆಯಾಗಿತ್ತು. ನನ್ನ ತಮ್ಮ ಶಿವುಕುಮಾರ ಆಂಧ್ರದಲ್ಲಿ ಬೇಕರಿಯಲ್ಲಿ ಕೆಲಸ ಮಾಡಿಕೊಂಡಿದ್ದ. ನನ್ನ ತಮ್ಮ 03 ತಿಂಗಳಿಗೊಮ್ಮೆ ಮನೆಗೆ ಬಂದುಹೋಗಿ ಮಾಡುತ್ತಿದ್ದ.

2. ನನ್ನ ತಮ್ಮ ಶಿವುಕುಮಾರವರ ಕೊಲೆಯಾಗುವ ಒಂದು ತಿಂಗಳ ಹಿಂದೆ ಊರಿಗೆ ಬಂದಿದ್ದ. ದಿಃ 04-04-2025 ರಂದು ಸಂಜೆ 7.20 ಗಂಟೆಗೆ ಚಾಸಾ-8 ಮತ್ತು 9 ರವರೊಂದಿಗೆ ಹೊನ್ನೂರು ಗ್ರಾಮಕ್ಕೆ ಹೋಗಿ ಬರುತ್ತೇನೆ ಹೇಳಿ ಹೋದವನು ವಾಪಸ್ಸು ಬರಲಿಲ್ಲ. ಮಾರನೇ ದಿನ ಬೆಳಿಗ್ಗೆ ಹೊನ್ನೂರು ಗ್ರಾಮದ ಒಂದು ಹೊಲದ ಹತ್ತಿರ ಕೊಲೆಯಾಗಿದೆ ಅಂತ ವಿಚಾರ ಗೊತ್ತಾಯಿತು. ನಂತರ ನಾನು, ಚಾಸಾ-1, 7 ರವರು ಹೊನ್ನೂರು ಗ್ರಾಮದ ಕೊಲೆಯಾಗಿರುವ ಜಾಗಕ್ಕೆ ಹೋದೆವು. ಅಲ್ಲಿ ನನ್ನ ತಮ್ಮನ ಮೂಗು, ಬಾಯಿ ಮತ್ತು ಹೊಟ್ಟೆಯ ಭಾಗದಲ್ಲಿ ರಕ್ತ ಗೂಡು ಕಟ್ಟಿತ್ತು. ನನ್ನ ತಮ್ಮನ ಮೈ ಮೇಲೆ ಪ್ಯಾಂಟ್ ಅಷ್ಟೇ ಇತ್ತು, ಶರ್ಟ್ ಇರಲಿಲ್ಲ.

3. ಚಾಸಾ-8 ರವರಿಗೆ ಮೃತ ಶಿವುಕುಮಾರ ₹200/- ರೂಪಾಯಿ ಕೊಟ್ಟು ನನಗೆ ಬೀರ್ ತೆಗೆದುಕೊಂಡು ನೀವು ಊಟ ಮಾಡಿಕೊಂಡು ಬನ್ನಿ ಅಂತ ಕಳುಹಿಸಿದ್ದ, ಬೀರ್ ಸಿಕ್ಕಿಲ್ಲ ಅಂತ ಚಾಸಾ-8 ರವರು ವಾಪಸ್ಸು ಬಂದಿದ್ದ. ಮೃತ ಶಿವುಕುಮಾರನಿಗೆ ಫೋನ್ ಮಾಡಿದಾಗ ಸ್ವಿಚ್ ಆಫ್ ಬಂತು. ಇನ್ನೊಂದು ನಂಬರಗೆ ಫೋನ್ ಮಾಡಿದಾಗ ಚಾಸಾ-10 ರವರು ಫೋನ್ ರಿಸಿವ್ ಮಾಡಿದರು, ಅವರು ಮೃತ ಶಿವುಕುಮಾರ ಇಲ್ಲಿ ಇದ್ದಾರೆ ಬನ್ನಿ ಅಂತ ಹೇಳಿದರು. ಚಾಸಾ-10 ರವರು ಮೃತ ಶಿವುಕುಮಾರರವರ ಜೊತೆ ಮಾತನಾಡುತ್ತಿರುವುದನ್ನು ನೋಡಿ ತನ್ನ ಗಂಡ ಮೃತ ಶಿವುಕುಮಾರರವರಿಗೆ ಹೊಡೆದರು, ಆಗ ಶಿವುಕುಮಾರರವರು ಹೊಲದ ಕಡೆಗೆ ಓಡಿ ಹೋದ, ಆತನ ಹಿಂದೆಯೇ ಆರೋಪಿ ಓಡಿ ಹೋಗಿದ್ದು, ಚಾಸಾ-8 ರವರು ಶಿವುಕುಮಾರರವರು ಸಿಕ್ಕಿಲ್ಲ ಅಂತ ಊರಿಗೆ ಹೋದರು ಅಂತ ಹೇಳಿದರು. ಚಾಸಾ-10 ರವರು ತನ್ನ ಗಂಡ ಜಯಪ್ಪರವರು ಶಿವುಕುಮಾರರವರನ್ನು ಕೊಲೆ ಮಾಡಿದ್ದಾರೆ ಅಂತ ಚಾಸಾ-8 ರವರಿಗೆ ತಿಳಿಸಿದರು. ಈ ವಿಷಯವನ್ನು ನನಗೆ ಚಾಸಾ-8 ರವರು ಹೇಳಿದರು. ನನ್ನ ತಮ್ಮ ಶಿವುಕುಮಾರರವರ ಸಾವಿಗೆ ವಿಸಿಯಲ್ಲಿ ಕಾಣುತ್ತಿರುವ ಆರೋಪಿಯೇ ಕಾರಣ ಆಗಿರುತ್ತಾನೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ**:

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಏನೂ ಇಲ್ಲ ಅಂತ ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.